**Code No. 18 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

## (ವೇಗ)

ಜನವರಿ, 2019

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಂತರ ಮಾಡಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ಎರಡು ಸಾವಿರದ ಹದಿನೆಂಟು
ಹತ್ತೊಂಬತ್ತನೇ ಸಾಲಿನ ಆಯವ್ಯಯ ಮುಂಗಡ
ಪತ್ರವನ್ನು ಮಂಡಿಸುತ್ತಿದ್ದೇನೆ. ಹದಿನಾಲ್ಕನೆಯ
1/4 ವಿಧಾನಸಭೆಯ ಕೊನೆಯ ಅಧಿವೇಶನಕ್ಕೆ/
ನಾವು–ನೀವೆಲ್ಲ ಸಾಕ್ಷಿಭೂತರಾಗಿದ್ದೇವೆ.
ನಾಲ್ಕು ದಶಕಗಳ ನಂತರ ವಿಧಾನಸಭೆ ಐದು
ವರ್ಷಗಳ ಅವಧಿಯನ್ನು ಪೂರ್ಣಗೊಳಿಸುವ
ಮೂಲಕ ರಾಜ್ಯದ ಜನತೆಯ ಸುಭದ್ರ
1/2 ಸರ್ಕಾರದ ಆಶ/ಯವನ್ನು ಸಾಕಾರಗೊಳಿಸಿದ
ಹೆಮ್ಮೆ ನಮ್ಮದು. ಐದು ವರ್ಷಗಳ ಅವಧಿಯ
ಜನಾದೇಶ ಪಡೆದು ವಿಧಾನಸಭೆ ಪ್ರವೇಶಿಸುವ
ನಮಗೆ ಅದನ್ನು ಪೂರ್ಣಗೊಳಿಸುವ
3/4 ಸಾಂವಿಧಾನಿಕ ಜವಾಬ್ದಾರಿ ಇದೆ./ ಇದನ್ನು
ನಿರ್ವಹಿಸಲು ಸಹಕಾರ ನೀಡಿದ ರಾಜ್ಯದ
ಜನತೆ ಹಾಗೂ ಆಳುವ ಮತ್ತು ವಿರೋಧ
ಪಕ್ಷಗಳ ಸದಸ್ಯರಿಗೆ ತುಂಬು ಮನಸ್ಸಿನಿಂದ
ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಯವ್ಯಯ ಎಂದXರೆ ನನ್ನ ಪಾಲಿಗೆ, 1
ಅಂಕಿಅಂಶಗಳ ಕಸರತ್ತು ಅಲ್ಲ. ನಿರ್ಜೀವ
ಲೆಕ್ಕಗಳ ಗಣಿತವೂ ಅಲ್ಲ. ಸರಳವಾಗಿ
ಹೇಳುವುದಾದರೆ ಇದು ಈ ರಾಜ್ಯದ
ಪ್ರತಿಯೊಬ್ಬ ಪ್ರಜೆಯ ನಿತ್ಯದ ಬದುಕಿನ ಲೆಕ್ಕ,
ಆ/ತನ ಮನೆಯ ಲೆಕ್ಕ, ಆಯವ್ಯಯ ಮುಂಗಡ 1/4
ಪತ್ರ ಎನ್ನುವುದು ಅಭಿವೃದ್ಧಿಯ
ಗುರಿಸಾಧನೆಯೆಡೆಗೆ ಸಾಗುವ ಮಾರ್ಗ ಎಂದು
ನಂಬಿದ್ದೇನೆ. ನುಡಿದಂತೆ ನಡೆಯಬೇಕೆಂಬುದು
ನನ್ನ ಬದುಕಿನ ಧ್ಯೇಯ. ಜನ/ತೆಗೆ ಕೊಟ್ಟ 1/2
ಭರವಸೆಗಳನ್ನೆಲ್ಲವನ್ನೂ ಈಡೇರಿಸಿದ
ಆತ್ಮಸಂತೃಪ್ತಿ ನಮ್ಮ ಸರ್ಕಾರದ್ದಾಗಿದೆ. ಇದೇ

ಬದ್ಧತೆಯಿಂದ ಮುಖ್ಯಮಂತ್ರಿಯಾಗಿ ಈವರೆಗೆ
ಮಂಡಿಸಿದ ಐದು ಆಯವ್ಯಯ ಪತ್ರಗಳೂ
$\frac{3}{4}$ ಸೇರಿ/ದಂತೆ ಒಟ್ಟು ಹನ್ನೆರಡು ಆಯವ್ಯಯ
ಪತ್ರಗಳನ್ನು ಮಂಡಿಸಿದ್ದೆ. ಇದು ಹದಿಮೂರನೆ
ಆಯವ್ಯಯ ಪತ್ರ. ಒಬ್ಬ ಸಾಮಾನ್ಯ ರೈತನ
ಮಗನಿಗೂ ಇಂತಹದ್ದೊಂದು ಭಾಗ್ಯ ಒದಗಿ
ಬಂದಿರುವುದೇ ಪ್ರಜಾಪ್ರಭುXತ್ವದ ನಿಜವಾದ
2 ಸೌಂದರ್ಯ, ಇದಕ್ಕಾಗಿ ದೇಶದ ಸಂವಿಧಾನಕ್ಕೆ
ಮತ್ತು ಅದನ್ನು ರೂಪಿಸಿದ ಶಿಲ್ಪಿ ಡಾ.
ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ
ತಲೆಬಾಗುತ್ತೇನೆ. ನಾನು ಅರ್ಥಶಾಸ್ತ್ರವನ್ನು
$\frac{1}{4}$ ಶಾಸ್ತ್ರೀಯವಾಗಿ/ ಅಧ್ಯಯನ ಮಾಡಿದ ತಜ್ಞ
ಅಲ್ಲ, ಅನುಭವಕ್ಕಿಂತ ಮಿಗಿಲಾದ ಜ್ಞಾನ ಬೇರೆ
ಇಲ್ಲ. ರಾಜಕೀಯ ಕ್ಷೇತ್ರ ನನ್ನ ಪಾಲಿನ
ಅನುಭವ ಮಂಟಪ. ನಾಲ್ಕು ದಶಕಗಳ ಕಾಲದ
$\frac{1}{2}$ ಸುದೀರ್ಘ ರಾಜಕೀಯ ಜೀವನ/ದಲ್ಲಿನ
ಜನರೊಂದಿಗಿನ ನನ್ನ ಒಡನಾಟದ ಮೂಲಕ
ಅವರಲ್ಲೊಬ್ಬನಾಗಿ ಗಳಿಸಿದ ಅನುಭವವನ್ನೇ
ಮುಂಗಡ ಪತ್ರದಲ್ಲಿ ಧಾರೆಯೆರೆಯುತ್ತಾ
$\frac{3}{4}$ ಬಂದಿದ್ದೇನೆ. ರಾಜ್ಯದ ಬೊಕ್ಕಸದಲ್ಲಿರುವುದು/
ಜನ ತೆರಿಗೆ ಮೂಲಕ ನೀಡಿರುವ ಬೆವರ
ಗಳಿಕೆಯ ಹಣ, ರಾಜ್ಯದ ಪ್ರತಿಯೊಬ್ಬ
ತೆರಿಗೆದಾರನಿಗೆ ಅವನು ನೀಡುವ
ಪ್ರತಿಯೊಂದು ಪೈಸೆ ತೆರಿಗೆಗೂ ಲೆಕ್ಕಪತ್ರ
3 ಒಪ್ಪಿಸುವ ಉತ್ತರದಾಯಿತ್ವX ನನಗಿದೆ. ಲೆಕ್ಕ
ಕೇಳುವ ಹಕ್ಕು ರಾಜ್ಯದ ಜನತೆಗಿದೆ,
ಆ ಹಕ್ಕನ್ನು ಗೌರವಿಸುವುದು ನನ್ನ
ಧರ್ಮ. ಅತ್ಯಂತ ಪಾರದರ್ಶಕವಾಗಿ,
ಪ್ರಾಮಾಣಿಕತೆಯಿಂದ ಆ ಲೆಕ್ಕವನ್ನು ಈ
ಆಯವ್ಯಯ ಮುಂಗಡಪತ್ರದ/ಲ್ಲಿ ಒಪ್ಪಿಸಿದ್ದೇನೆ. $\frac{1}{4}$

ನಮ್ಮ ಸರ್ಕಾರದ ಈವರೆಗಿನ
ಆಯವ್ಯಯಗಳನ್ನು ಗಮನಿಸಿದರೆ ಅದರ
ಕೇಂದ್ರದಲ್ಲಿ ಜಾತಿ, ಧರ್ಮ, ಪ್ರದೇಶವನ್ನು
ಮೀರಿದ ಸಾಮಾನ್ಯ ಮನುಷ್ಯನ
ಹಿತಚಿಂತನೆಯೇ ಪ್ರಧಾನ/ವಾಗಿ ಇರುವುದನ್ನು $\frac{1}{2}$
ಕಾಣಬಹುದು, ಸಮಾನತೆಯ ತತ್ವವನ್ನು
ದೇಶಕ್ಕೆ ಬೋಧಿಸಿರುವ ನಮ್ಮ ನಾಡಿನ
ಮಹಾಪುರುಷರ ಆಶಯಗಳನ್ನು ಎತ್ತಿ
ಹಿಡಿಯುವ ಪ್ರಾಮಾಣಿಕ ಪ್ರಯತ್ನವನ್ನೂ
ನಾವು ಮಾಡು/ತ್ತಾ ಬಂದಿದ್ದೇವೆ. ಈ ಘನ $\frac{3}{4}$
ಪರಂಪರೆಯನ್ನು ಮುಂದುವರೆಸುತ್ತಾ
ಬರಲಿರುವ ದಿನಗಳಲ್ಲಿ ನವ ಆಶೋತ್ತರಗಳನ್ನು
ಸಾಕಾರಗೊಳಿಸುವ ನವ ಕರ್ನಾಟಕವನ್ನು
ಕಟ್ಟುವ ಪ್ರಯತ್ನವನ್ನು ಪ್ರಸಕ್ತX ಆಯವ್ಯಯ 4
ಮುಂಗಡ ಪತ್ರದಲ್ಲಿ ಮಾಡಿದ್ದೇನೆ. ಇಂದು
ನಮ್ಮ ನಾಡಿನಲ್ಲಿ ಯಾರೊಬ್ಬರೂ ಹಸಿದು
ಮಲಗುವಂತ ಪರಿಸ್ಥಿತಿ ಇಲ್ಲ, ಹೊಟ್ಟೆ ತುಂಬಾ
ಊಟ ಎನ್ನುವುದು ಬಡವರ ಪಾಲಿಗೆ
ದುಬಾರಿಯೂ ಅಲ್ಲ, ಕ/ನಸೂ ಅಲ್ಲ. $\frac{1}{4}$
ಆಹಾರದ ಹಕ್ಕನ್ನು ನೀಡಿದ ತೃಪ್ತಿ ನಮ್ಮದು,
ಹಸಿವಿನ ವಿರುದ್ಧದ ಹೋರಾಟದಲ್ಲಿ ಕರ್ನಾಟಕ
ಗೆದ್ದಿದೆ.

ನಮ್ಮದು ರೈತಸ್ನೇಹಿ ಸರ್ಕಾರ, ರೈತನ
ಮಗನಾದ ನನಗೆ ರೈತನ ಮನೆಯ/ ಕಷ್ಟಗಳ $\frac{1}{2}$
ಅನುಭವ ಇದೆ. ರೈತರ ಸಂಕಷ್ಟ ಕಾಲದಲ್ಲಿ

ನಮ್ಮ ಸರ್ಕಾರ ಅವರ ಜೊತೆಯಲ್ಲಿ ನಿಂತಿದೆ.
ಸಾಲಮನ್ನಾ, ಬಡ್ಡಿರಹಿತ ಸಾಲ, ಬೆಂಬಲ ಬೆಲೆ,
$\frac{3}{4}$ ಕೃಷಿಭಾಗ್ಯ ಸೇರಿದಂತೆ ಹತ್ತಾರು ಯೋಜನೆ/ಗಳ
ಮೂಲಕ ರೈತರ ಬವಣೆಯನ್ನು ನಿವಾರಿಸುವ
ಪ್ರಯತ್ನವನ್ನು ನಾವು ಮಾಡಿದ್ದೇವೆ. ಇದು
ಸರ್ಕಾರ ಮಾಡುವ ಉಪಕಾರ ಅಲ್ಲ. ರೈತರ
ಕಷ್ಟದ ಹೊರೆಯನ್ನು ಸ್ವಲ್ಪ ತಗ್ಗಿಸುವ ಮೂಲಕ
5 ಅನ್ನದಾXತರಾದ ರೈತರ ಋಣ ತೀರಿಸುವ
ಒಂದು ಸಣ್ಣ ಪ್ರಯತ್ನ ಅಷ್ಟೇ. ಆರೋಗ್ಯ ಶಿಕ್ಷಣ,
ವಸತಿಯಂತಹ ಕ್ಷೇತ್ರಗಳಲ್ಲಿ ನಾವು ಇಟ್ಟಿರುವ
ದಿಟ್ಟ ಹೆಜ್ಜೆಗಳನ್ನು ದೇಶವೇ ಗುರುತಿಸಿದೆ ಹಾಗೂ
$\frac{1}{4}$ ಅನುಕರಿ/ಸಿದೆ. ನಮ್ಮ ರಚನಾತ್ಮಕ ಆಡಳಿತ
ದೇಶಕ್ಕೆ ಪ್ರೇರಣೆಯಾಗಿದೆ, ಅದೇ ರೀತಿ,
ದೇಶದಲ್ಲೇ ಅತಿ ಹೆಚ್ಚು ಬಂಡವಾಳ
ಹೂಡಿಕೆಯನ್ನು ಆಕರ್ಷಿಸುವ ಮೂಲಕ ನಾವು
$\frac{1}{2}$ ಮಾದರಿಯಾಗಿದ್ದೇವೆ. ಶಾಂತಿ, ಸಾಮರ/ಸ್ಯ
ನೆಲೆಸಿರುವ, ಬಂಡವಾಳ ಹೂಡಿಕೆ ಸ್ನೇಹಿ
ಆಡಳಿತ ನೀತಿಗಳನ್ನು ಹೊಂದಿರುವ ನಾಡಿಗೆ
ಬಂಡವಾಳ ಸಹಜವಾಗಿಯೇ ಹರಿದು
ಬರುತ್ತದೆ, ವಿಫುಲ ಉದ್ಯೋಗಾವಕಾಶಗಳೂ
$\frac{3}{4}$ ಸೃಷ್ಠಿಯಾಗುತ್ತವೆ./ ಉದ್ಯೋಗ ನಮ್ಮ
ಸರ್ಕಾರದ ಇನ್ನೊಂದು ಆಧ್ಯತೆ ಕ್ಷೇತ್ರ
ಯುವಪೀಳಿಗೆಗೆ ಉದ್ಯೋಗಾವಕಾಶ ಕಲ್ಪಿಸಿ
ಈ ಮೂಲಕ ಸರ್ಕಾರದ ಯೋಜನೆಗಳನ್ನು
ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು
6 ನXಮ್ಮ ಉದ್ದೇಶ. ಇದರಂತೆ ಶಿಕ್ಷಣ, ಆರೋಗ್ಯ
ಮತ್ತು ಕುಟುಂಬ ಕಲ್ಯಾಣ, ಪೊಲೀಸ್,
ವಿದ್ಯುತ್, ಗ್ರಾಮೀಣ ಅಭಿವೃದ್ಧಿ, ನಗರಾಭಿವೃದ್ಧಿ,
ಅರಣ್ಯ ಸಮಾಜ ಕಲ್ಯಾಣ, ಹಿಂದುಳಿದ
ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾ/ತರ ಕಲ್ಯಾಣ, $\frac{1}{4}$
ಸಾರಿಗೆ ಸೇರಿದಂತೆ ಸರ್ಕಾರದ ಪ್ರಮುಖ
ಇಲಾಖೆಗಳಲ್ಲಿ ಕಳೆದ ಐದು ವರ್ಷಗಳಲ್ಲಿ
ಒಂದೂವರೆ ಲಕ್ಷಕ್ಕೂ ಹೆಚ್ಚು ಸರ್ಕಾರಿ
ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇದರ
ಜೊತೆಗೆ/ ಖಾಸಗಿ ಕ್ಷೇತ್ರದಲ್ಲಿಯೂ ನಮ್ಮ $\frac{1}{2}$
ರಾಜ್ಯದ ಯುವಪೀಳಿಗೆಗೆ ಉದ್ಯೋಗ
ಸೃಷ್ಟಿಸಬೇಕೆನ್ನುವ ನಮ್ಮ ಪ್ರಯತ್ನವೇ ಇಂದು
ಕರ್ನಾಟಕವನ್ನು ಬಂಡವಾಳ ಹೂಡಿಕೆಯಲ್ಲಿ
ದೇಶದಲ್ಲೇ ಅತ್ಯಂತ ಪ್ರಶಸ್ತ ತಾಣವಾ/ಗಿ $\frac{3}{4}$
ಮಾಡಲಾಗಿದೆ. ಕರ್ನಾಟಕದ ಆಶೋತ್ತರಗಳಿಗೆ
ಪೂರಕವಾಗಿ ದೇಶದಲ್ಲಿಯೇ ವಿನೂತನವಾದ
ಸ್ಟಾರ್ಟ್‌ಅಪ್ ನೀತಿಯನ್ನು ಜಾರಿಗೆ ತಂದು
ಬೆಂಗಳೂರನ್ನು ಸ್ಟಾರ್ಟ್‌ಅಪ್ ರಾಜಧಾನಿ
ಯನ್ನಾಗಿಸಿದ್ದೇವೆ.X 7

ಮಾನ್ಯರೆ,

ದಿನಾಂಕ ಇಪ್ಪತ್ತೆಂಟನೇ ಸೆಪ್ಟೆಂಬರ್
ಎರಡು ಸಾವಿರದ ಹದಿನೆಂಟರ ನಿಮ್ಮ ಪತ್ರದ
ಆದೇಶದ ಅನುಸಾರ ನೀವು ಕೇಳಿದ ಮೊಬಲಗಿನ
ದಿನಸಿ ಪದಾರ್ಥಗಳನ್ನು ಲಾರಿ ಸಾಗಾಣಿಕೆ/ $\frac{1}{4}$
ಮೂಲಕ ಕಳುಹಿಸಿಕೊಟ್ಟಿದ್ದೇವೆ. ಮಾಲು ನಿಮಗೆ
ತಲುಪಿದ ತಕ್ಷಣ ಬಾಕಿ ಹಣವನ್ನು ಪಾವತಿ
ಮಾಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

ಈ ಹಿಂದೆ ನಾವು ಗಣೇಶ ಹಬ್ಬಕ್ಕೆ
ಕಳುಹಿಸಿಕೊಟ್ಟ ದಿ/ನಸಿ ಪದಾರ್ಥಗಳು ಬಹಳ $\frac{1}{2}$

ಕಳಪೆಯ ಮಟ್ಟದ್ದಾಗಿತ್ತೆಂದು ನೀವು
ದೂರಿರುತ್ತೀರಿ. ಅವುಗಳನ್ನು ಉಪಯೋಗಿಸಿದ
ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆಂದು
$\frac{3}{4}$ ತಿಳಿಸಿದ್ದೀರಿ. ಮುಂದಿನ ದಸ/ರಾ ಹಬ್ಬಕ್ಕೆ
ಕಳುಹಿಸಿ ಕೊಡುವ ದಿನಸಿ ಪದಾರ್ಥಗಳು ಇದೇ
ರೀತಿ ಕಳಪೆ ಗುಣಮಟ್ಟದ್ದಾಗಿದ್ದಲ್ಲಿ ನಮ್ಮ ಜೊತೆ
ವ್ಯಾಪಾರ ಸಂಬಂಧವನ್ನು ನಿಲ್ಲಿಸುವಿರಿ ಎಂಬ
8 ವಿಷಯವನ್ನು ಕೇಳಿ ನಮಗೆ ಬಹಳX
ಬೇಸರವಾಯಿತು. ಆದರೆ ನಿಮಗೆ ಮಾಲು
ಕಳುಹಿಸುವ ದಿನದಂದೇ ನಿಮಗೆ ಕಳುಹಿಸಿರುವ
ಪದಾರ್ಥಗಳನ್ನೇ ಇನ್ನು ಹಲವು ಚಿಲ್ಲೆಗಳ
ಸಗಟು ಮತ್ತು ಚಿಲ್ಲರೆ ಮಾರಾಟಗಾರರಿಗೆ
$\frac{1}{4}$ ಕಳುಹಿ/ಸಿಕೊಟ್ಟಿದ್ದು ಅವರುಗಳಿಂದ
ಪದಾರ್ಥಗಳ ಗುಣಟ್ಟದ ಬಗ್ಗೆ ಯಾವುದೇ
ದೂರುಗಳು ಬಂದಿರುವುದಿಲ್ಲ. ಆದರೂ
ತಮ್ಮ ಮಾತನ್ನು ತೆಗೆದುಹಾಕದೇ ಈ ಬಗ್ಗೆ
$\frac{1}{2}$ ಕೂಲಂಕುಷವಾಗಿ ಪರಿಶೀಲನೆ ಮಾಡಲು/
ತೀರ್ಮಾನಿಸಿ ಒಂದು ಪರಿಶೀಲನಾ ತಂಡವನ್ನು
ನಿಯೋಜಿಸಿದ್ದೇವೆ ಇದಕ್ಕೆ ನಿಮ್ಮ ಸಹಾಯ
ಅಗತ್ಯವಾಗಿ ಬೇಕಾಗಿರುತ್ತದೆ.

ಈ ಪತ್ರದ ಮೂಲಕ ನಿಮಗೆ
$\frac{3}{4}$ ತಿಳಿಸುವುದೇನೆಂದರೆ ನಾವು ಕಳುಹಿಸಿದ್ದ/
ದಿನಸಿ ಪದಾರ್ಥಗಳು ಸಂಪೂರ್ಣವಾಗಿ
ಮಾರಾಟವಾಗದೆ ಹಾಗೆ ಉಳಿದಿದ್ದಲ್ಲಿ ಕೂಡಲೇ
ಅವುಗಳನ್ನು ಮರಳಿ ಕಳುಹಿಸಿಕೊಡಿ, ಇದಕ್ಕೆ
ತಗಲುವ ಸಾಗಣೆ ವೆಚ್ಚವನ್ನು ನಾವೇ
ಭರಿಸಿಕೊಡುತ್ತೇವೆ. ನೀXವು ಕಳುಹಿಸಿಕೊಡುವ 9
ಪದಾರ್ಥಗಳ ಬೆಲೆಗೆ ಸಮನಾಗಿ ನೀವು
ಒಪ್ಪಿದಲ್ಲಿ ನಮ್ಮ ಅಂಗಡಿಯಲ್ಲಿ ದೊರೆಯುವ
ಇತರೆ ಬೇಳೆ ಪದಾರ್ಥಗಳು, ಎಣ್ಣೆ
ಪದಾರ್ಥಗಳು, ವಿವಿಧ ನಮೂನೆಯ ಅಕ್ಕಿ
ಮತ್ತು/ ಇನ್ನಿತರೆ ಪದಾರ್ಥಗಳನ್ನು ನಿಮಗೆ $\frac{1}{4}$
ಸರಬರಾಜು ಮಾಡುತ್ತೇವೆಂಬ ಭರವಸೆಯನ್ನು
ನಾವು ಕೊಡುತ್ತೇವೆ. ಇದರಿಂದ ನಿಮಗಾಗಿರುವ
ನಷ್ಟಕ್ಕೆ ಅಲ್ಪ ಸ್ವಲ್ಪ ಸಹಾಯವಾದರೂ
ಆಗಬಹುದು ಎಂದು/ ನಂಬಿದ್ದೇನೆ. ಇನ್ನು $\frac{1}{2}$
ಮುಂದೆ ಈ ರೀತಿಯ ಅಚಾತುರ್ಯ
ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಇದುವರೆವಿಗೂ ನಮ್ಮ ವ್ಯಾಪಾರ
ಸಂಬಂಧ ಯಾವ ರೀತಿ ಇತ್ತೋ ಅದೇ ರೀತಿ
ಮುಂದೆಯೂ ಸಹ ಮುಂದು/ವರೆಯಬೇಕೆಂದು $\frac{3}{4}$
ಹಾಗೂ ನಿಮ್ಮ ವ್ಯಾಪಾರ ಸಮೃದ್ಧಿಯಾಗಲಿ
ಎಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಾರಾ ಟ್ರೇಡರ್ಸ್, ಹಾಸನ ಪರವಾಗಿ,
(ಸಾರಾ ತಬಸ್ಸುಮ್)
ವ್ಯವಸ್ಥಾಪಕ ನಿರ್ದೇಶಕರು.X 10